

# ಹೆಗ್ಗುಂದ

## ಶ್ರೀರಾಮನ ಅಶ್ವಮೇಧದ ಕುದುರೆ ಕಟ್ಟಿದ ಸ್ಥಳ

**ತುಮಕೂರಿಗೆ ಸಮೀಪದ ಹೆಗ್ಗುಂದ, ಶ್ರೀರಾಮನ ಪ್ರಭಾವಳಿಯೊಂದಿಗೆ ತಳುಕು ಹಾಕಿಕೊಂಡಿರುವ ಸ್ಥಳ. ಪೌರಾಣಿಕ ಸ್ತಂಭ, ಐತಿಹಾಸಿಕ ದುರ್ಗೆಯರ ಈ ಪುರಾಣ ಪ್ರಭೆಯ ಸ್ಥಳ ಹೊಯ್ಸಳ ರಾಜ ವಿಷ್ಣುವರ್ಧನನ ಕುರುಹುಗಳನ್ನೂ ಹೊಂದುವ ಮೂಲಕ ಚಾರಿತ್ರಿಕ ಮಹತ್ವವನ್ನೂ ಪಡೆದುಕೊಂಡಿದೆ.**

■ **ಡಾ. ಕೀರ್ತಿ ಮಲ್ಹೋತ್ರ**

ತುಮಕೂರಿಗೆ ರೈಲಿನಲ್ಲಿ ಹೊರಟಾಗೆಲ್ಲ, ನಿಡವಂಡಾ ನಿಲ್ದಾಣದ ಹತ್ತಿರ ದೂರ ದಿಗಂತದಲ್ಲಿ ಕಾಣುವ ಒಂದು ಬೃಹತ್ ಬೆಟ್ಟವನ್ನು ತದೇಕಚಿತ್ತವಾಗಿ ನೋಡುತ್ತಿದ್ದೆ. ದೈತ್ಯ ಹಸ್ತಗಳು ವಜ್ರಾಕಾರದ ಬಂಡೆಗಳನ್ನು ಸಿಂಹದ ಆಕಾರದಲ್ಲಿ ಅಂಟಿಸಿ ಕೂರಿಸಿದಂತಿತ್ತು. ಸ್ಥಳೀಯರು 'ಅದು ಹೆಗ್ಗುಂದ ಬೆಟ್ಟ, ಅಲ್ಲಿ ಶ್ರೀರಾಮರ ಅಶ್ವಮೇಧ ಯಾಗದ ಹಯವನ್ನು (ಕುದುರೆಯನ್ನು) ಬೆಟ್ಟದ ಮೇಲ್ತುದಿಯ ಸ್ತಂಭಕ್ಕೆ ಕಟ್ಟಿದ್ದರು. ಅದಕ್ಕೇ ಆ ಬೆಟ್ಟ ಮತ್ತು ಹಳ್ಳಿಗೆ ಹಯಗುಂದ ಅನ್ನುವ ಹೆಸರು ಹಿಂದೆ ಇತ್ತು. ಅದೇ ಕಾಲಕ್ರಮೇಣ ಜನರ ಬಾಯಲ್ಲಿ ಹೆಗ್ಗುಂದ ಆಯಿತು' ಎಂದು ತಿಳಿಸಿದಾಗ ಮತ್ತಷ್ಟು ಕುತೂಹಲ ಕೆರಳಿಸಿತ್ತು ಈ ಬೆಟ್ಟ.

ಹೆಗ್ಗುಂದದ ಬಗ್ಗೆ ಒಂದಿಷ್ಟು ಇತಿಹಾಸವನ್ನು ಕೆದಕುತ್ತಿದ್ದಂತೆ, 1905ರ ಎಪಿಗ್ರಾಫಿಯ ಕರ್ನಾಟಿಕದ ಒಂಬತ್ತನೇ ಹೊತ್ತಿಗೆಯಲ್ಲಿ ಹಾಗೂ 1914–1915ರ ಮೈಸೂರ್ ಆರ್ಕಿಯಾಲಜಿಕಲ್ ಸರ್ವೆ ರಿಪೋರ್ಟ್ (ಎಮ್.ಎ.ಎಸ್.)ನಲ್ಲಿ ಈ ದೊಡ್ಡ ಬಂಡೆ ಬೆಟ್ಟದ ಬುಡದ ಪುಟ್ಟ ಹಳ್ಳಿ ಹೆಗ್ಗುಂದದ ಕುರಿತು ಮಾಹಿತಿ ಸಿಕ್ಕಿತು. ಎಪಿಗ್ರಾಫಿಯ ಒಂಬತ್ತನೇ ಹೊತ್ತಿಗೆ 1115 ಹಾಗೂ 1152ರ ಎರಡು ಶಾಸನಗಳನ್ನು ಉಲ್ಲೇಖಿಸಿತ್ತು. ಒಂದು ಬೆಟ್ಟದ ಮೇಲಿನ ಮಲ್ಲಿಕಾರ್ಜುನ ಗುಹಾಂತರ ದೇವಾಲಯದ ಪ್ರವೇಶದಲ್ಲಿರುವ ಬಂಡೆಯ ಮೇಲಿನ ಶಾಸನ, ಇನ್ನೊಂದು ಅದೇ ದೇವಾಲಯದ ಗುಹೆಯ ಒಳಗೆ ಒಂದು ನೆಟ್ಟಕಲ್ಲಿನ ಮೇಲಿರುವ ಶಾಸನ. ಎರಡೂ ಮಲ್ಲಿಕಾರ್ಜುನ ದೇವರಿಗೆ ಬಿಟ್ಟುಕೊಟ್ಟ 'ದೈವ ದಾನ'ವನ್ನು ಕುರಿತಾಗಿತ್ತು.

ಎಮ್.ಎ.ಎಸ್. (1914–15) ಪ್ರಕಾರ 1115ರ ಶಾಸನ ಈ ಹಳ್ಳಿಯ ಹೆಸರನ್ನು ಪೆರ್‌ಕುಂಡಾ ಎಂದು ಉಲ್ಲೇಖಿಸುತ್ತದೆ. ಇದು ಹೆಗ್ಗುಂದದ ಹಳೆಯ ಕನ್ನಡದ ಹೆಸರು ಪೆರ್‌ಗುಂಡಾವನ್ನು ಹೋಲುವುದೆಂದು ತಿಳಿಸಿದೆ. ಶಿವಗಂಗೆ ಬೆಟ್ಟವನ್ನು ಏರುವಾಗ, ನಾನು ಅಲ್ಲಿಯ ಕೆಂಪೇಗೌಡ ಹಜಾರ ಎನ್ನುವ ಮಂಟಪದ ಬಗಲಿನಲ್ಲಿ, ಕಲ್ಲಿನ ದೀಪಸ್ತಂಭದ ಬುಡದಲ್ಲಿ ದೊಡ್ಡ ಅಕ್ಷರದ 1366ರ ಶಾಸನವನ್ನು ಕಂಡಿದ್ದೆ. ಆ ಶಾಸನದಲ್ಲಿ ಹೆಗ್ಗುಂದದ ಬೈರದಾಸನ ಮಗ ಮಾರದಾಸನ ಉಲ್ಲೇಖವಿದೆ. ಅಂದರೆ ಅಷ್ಟು ಹೊತ್ತಿಗಾಗಲೆ ಪೆರ್‌ಗುಂಡಾ, ಹೆಗ್ಗುಂದ ಆಗಿತ್ತು.

ಇಷ್ಟು ಇತಿಹಾಸದೊಡನೆ ಹೆಗ್ಗುಂದ ಬೆಟ್ಟದ



ಬೆಟ್ಟದ ಶಿಖರದಲ್ಲಿನ ಈ ಸ್ತಂಭಕ್ಕೆ ರಾಮನ ಅಶ್ವಮೇಧದ ಕುದುರೆಯನ್ನು ಕಟ್ಟಿದ್ದರೆಂಬ ನಂಬುಗೆ.